# ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ನಂ:1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು-560027

ಸಂಖ್ಯೆ:ಕಾ/ರೇರಾ/ಆಡಳಿತ/ಸಿಆರ್/01/2021-22 ದಿನಾಂಕ: 06.01.2022

## ಸು ತ್ತೋ ಲೆ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಒಂದು ಅರೆ ನ್ಯಾಯಿಕ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ದಿನಾಂಕ 11.07.2017ರಿಂದ ಸ್ಥಾಪಿತವಾಗಿದ್ದು, ರೇರಾ ಪ್ರಾಧಿಕಾರವು ಮಾನ್ಯ ಉಚ್ಛ ನ್ಯಾಯಾಲಯದ ಮಾದರಿಯನ್ನು ಅನುಸರಿಸಿಕೊಂಡು ಬರುತ್ತಿದೆ.

ರಿಯಲ್ ಎಸ್ಟೇಟ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಒಂದು ಕಾನೂನು ಬದ್ಧ ವೇದಿಕೆಯನ್ನು ಒದಗಿಸಿಕೊಟ್ಟಿದ್ದು, ರಿಯಲ್ ಎಸ್ಟೇಟ್ ಉದ್ದಿಮೆದಾರರಿಂದ, ಏಜೆಂಟರಿಂದ ಹಾಗೂ ಸಾರ್ವಜನಿಕರಿಂದ ದೂರುಗಳನ್ನು ದಾಖಲಿಸಿ, ಪರಿಹಾರ ಪಡೆದುಕೊಳ್ಳುತ್ತಿದ್ದಾರೆ. ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಮಾನ್ಯ ಅಧ್ಯಕ್ಷರು ಹಾಗೂ ಇಬ್ಬರು ಸದಸ್ಯರನ್ನೊಳಗೊಂಡ ಪೀಠದಲ್ಲಿ ವಿಚಾರಣೆಯನ್ನು ಪ್ರತೀ ದಿನವೂ ವೀಡಿಯೋ ಕಾನ್ಫರೆನ್ಸಿಂಗ್ / ಮುಕ್ತ ನ್ಯಾಯಾಲಯದಲ್ಲಿ ವಿಚಾರಣೆಯನ್ನು ನಡೆಸುತ್ತಿರುತ್ತಾರೆ. ಈ ನಿಟ್ಟಿನಲ್ಲಿ, ಪ್ರಾಧಿಕಾರದ ಮಾನ್ಯ ನ್ಯಾಯಾಲಯದ ಘನತೆಯನ್ನು ಕಾಪಾಡಿಕೊಳ್ಳಲು ನ್ಯಾಯಾಲಯದ ಕೊಠಡಿಗೆ ಪ್ರವೇಶಿಸುವ ಮುನ್ನ ಪ್ರಕರಣಗಳಿಗೆ ಸಂಬಂಧಪಟ್ಟ ವಕೀಲರುಗಳು ಹಾಗೂ ಸಂಬಂಧಿಸಿದ ಸಾರ್ವಜನಿಕರು, ನ್ಯಾಯಾಲಯದ ಕೊಠಡಿಗೆ ಪ್ರವೇಶಿಸುವ ಮೊದಲು ಸೂಕ್ತವಾದ ಉಡುಗೆಗೆ ಸಂಬಂಧಿಸಿದ ಮಾನ ದಂಡಗಳಂತೆ ಹಾಜರಾಗಲು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ತೀರ್ಮಾನಿಸಿ ಸೂಚಿಸಿದೆ.

1. **ವಕೀಲರಿಗೆ ಸಂಬಂಧಿಸಿದಂತೆ:**

   *ಪ್ರಾಧಿಕಾರದ ನ್ಯಾಯಾಲಯದ ಮುಂದೆ ಹಾಜರಾಗುವ ಎಲ್ಲಾ ವಕೀಲರು ನಿಯಮಿತ ಡ್ರೆಸ್ ಕೋಡ್‌ನ್ನು ಧರಿಸಿರಬೇಕು. ನ್ಯಾಯಾಲಯದ ಮುಂದೆ ಹಾಜರಾಗುವ ಪುರುಷ ವಕೀಲರಿಗೆ ಕಾಲರ್ ಇರುವ ಬಿಳಿ ಶರ್ಟ್, ಕಪ್ಪು ಉದ್ದನೆಯ ಪ್ಯಾಂಟ್, ಬಿಳಿ ನೆಕ್ ಬ್ಯಾಂಡ್ ಧರಿಸತಕ್ಕದ್ದು. ಮಹಿಳಾ ವಕೀಲರು ಬಿಳಿ ಸಲ್ವಾರ್ ಕಮೀಜ್ ಅಥವಾ ಸಮಚಿತ್ತ ಬಣ್ಣದ ಸೀರೆ, ಕುಪ್ಪಸ ಅಥವಾ ಮೇಲುಡಿಗೆ ಹಾಗೂ ಉದ್ದವಾದ ಪ್ಯಾಂಟ್, ಬಿಳಿ ನೆಕ್ ಬ್ಯಾಂಡ್ ಧರಿಸತಕ್ಕದ್ದು.*

2. **ಸಾರ್ವಜನಿಕರು / ಕಕ್ಷಿದಾರರಿಗೆ ಸಂಬಂಧಿಸಿದಂತೆ:**

   *ಪುರುಷರು ಕಾಲರ್ ಇರುವ ಶರ್ಟ್ ಮತ್ತು ಉದ್ದವಾದ ಪ್ಯಾಂಟ್ ಧರಿಸಿರಬೇಕು. ಮಹಿಳೆಯರು ಯಾವುದೇ ಸಮಚಿತ್ತದ ಬಣ್ಣದ ಸೀರೆ, ಕುಪ್ಪಸ ಹಾಗೂ ಮೇಲುಡುಗೆ ಸಲ್ವಾರ್ ಕಮೀಜ್ ಅಥವಾ ಉದ್ದವಾದ ಪ್ಯಾಂಟ್ ಧರಿಸಿರಬೇಕು.*

**ಇದನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.**

06.01.2022

*(ಎಲ್.ಎಸ್ ಶ್ರೀಕಂಠಬಾಬು)*
**ಜಂಟಿ ಕಾರ್ಯದರ್ಶಿ,**
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

**ಇವರಿಗೆ,**

1. ಪ್ರಾಧಿಕಾರಕ್ಕೆ ಆಗಮಿಸುವ ಎಲ್ಲಾ ಸಾರ್ವಜನಿಕರಿಗೆ.
2. ಪ್ರಾಧಿಕಾರಕ್ಕೆ ಆಗಮಿಸುವ ಎಲ್ಲಾ ವಕೀಲರುಗಳಿಗೆ.

**ಪ್ರತಿಯನ್ನು:-**

1. ಮಾನ್ಯ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ರವರಿಗೆ, ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು.
2. ಮಾನ್ಯ ಸದಸ್ಯರು-1 ಮತ್ತು ಮಾನ್ಯ ಸದಸ್ಯರು-2 ರವರ ಆಪ್ತ ಸಹಾಯಕರುಗಳಿಗೆ ಸಲ್ಲಿಸುತ್ತಾ, ಮಾನ್ಯ ಸದಸ್ಯರುಗಳ ಅವಗಾಹನೆಗೆ ತರಲು.
3. ಕಾರ್ಯದರ್ಶಿಗಳ ಆಪ್ತ ಸಹಾಯಕರಿಗೆ, ಕಾರ್ಯದರ್ಶಿಯವರ ಅವಗಾಹನೆಗೆ ತರಲು.
4. ಸಿಸ್ಟಂ ಅನಾಲಿಸ್ಟ್, ರೇರಾ, ವೆಬ್ ಪೋರ್ಟಲ್‌ನಲ್ಲಿ ದಾಖಲಿಸಲು / ಕಛೇರಿ ರಕ್ಷಾ ಕಡತ.

ದೂರವಾಣಿ ಸಂಖ್ಯೆ:080-22249798/ 22249799, ಇ-ಮೇಲ್: info.rera@karnataka.gov.in ವೆಬ್‌ಸೈಟ್: rera.karnataka.gov.in